ತೀರ್ಥಹಳ್ಳಿಯ 1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 01/2018.**

| | | |
|---|---|---|
| ಪಿರ್ಯಾದುದಾರರು | ವಿರುದ್ಧ | ಆರೋಪಿ |
| ಮಾಳೂರು ಪೊಲೀಸ್ | | ಜಿ.ಎಂ.ಹಸೈನಾರ್. |

**ದೋಷಾರೋಪಣೆ**

ಶ್ರೀ. ವೆಂಕಟೇಶ.ಕೆ.ಎನ್., 1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ತೀರ್ಥಹಳ್ಳಿ ಆದ ನಾನು

ಆರೋಪಿಯಾದ : ಜಿ.ಎಂ.ಹಸೈನಾರ್ ಬಿನ್ ದಿಃ ಮೊಸಬಾ ಬ್ಯಾರಿ,
ವಾಸಃ ಶಿವಾಜಿ ನಗರ, ಕುವೆಟ್ಟು,
ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

ನಿಮ್ಮ ಮೇಲೆ ದೋಷಾರೋಪಣೆ ಮಾಡುವುದು ಏನೆಂದರೆ,

ದಿನಾಂಕಃ04-04-2016 ರಂದು ರಾತ್ರಿಯ ಸಮಯದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ವಲಯದ ಉಬ್ಬೂರು ಶಾಖೆಯ ಕಿಕ್ಕೇರಿ ಕಪ್ಪೆಹೊಂಡ ಪ್ರದೇಶದ ಟಾರ್ ರಸ್ತೆಯ ಪಕ್ಕದಲ್ಲಿ ಬೈರುಗುಂಡಿಯ ಕಡೆಗೆ ಹೋಗುವ ಕಾಡು ದಾರಿಯ ಸಾಗುವಾನಿ ನೆಡುತೋಪಿನ ಮಧ್ಯದಲ್ಲಿ ಹಳೆಯ ಬಿದಿರು ಪಾಳಿಯ ಮರೆಯಲ್ಲಿ ಕಿಕ್ಕೇರಿ ಗ್ರಾಮದ ಸ.ನಂ.35/2 ಉಬ್ಬೂರೂ ಎಂ.ಎಫ್.ನ ಅರಣ್ಯ ಪ್ರದೇಶಕ್ಕೆ ಆರೋಪಿಯಾದ ನೀವು ಸ್ವರಾಜ್ ಮಾಜ್ಡ ಎಲ್.ಟಿ.ಡಿ. ಗೂಡ್ಸ್ ಸಂಖ್ಯೆ: ಕೆ.ಎ-20/ಎ-1673 ವಾಹನದಲ್ಲಿ ಅಕ್ರಮವಾಗಿ ಪ್ರವೇಶಿಸಿ ಬೀಟೆ ಮರಗಳನ್ನು ಕಡಿತಲೆ ಮಾಡಿದ್ದು, ಆ ಮೂಲಕ ಕರ್ನಾಟಕ ಅರಣ್ಯ ಕಾಯಿದೆ ಕಲಂ.24(ಇ) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

2 ನೇಯದಾಗಿ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಬೀಟೆ ಜಾತಿಯ ಮರಗಳನ್ನು ಕಡಿತಲೆ ಮಾಡಿ 19 ತುಂಡುಗಳನ್ನಾಗಿ ಪರಿವರ್ತಿಸಿ 24=653 ಘ.ಮೀ., ಬೆಲೆಬಾಳುವ ಬೀಟೆ ತುಂಡುಗಳನ್ನು ಸ್ಥಳದಲ್ಲಿ ದಾಸ್ತಾನು ಮಾಡಿ ಸ್ವರಾಜ್ ಮಾಜ್ಡ ಎಲ್.ಟಿ.ಡಿ. ಗೂಡ್ಸ್ ಸಂಖ್ಯೆ: ಕೆ.ಎ-20/ಎ-1673 ವಾಹನದಲ್ಲಿ ಸಾಗಿಸಲು ಪ್ರಯತ್ನಿಸಿದ್ದು, ಆ ಮೂಲಕ ಕರ್ನಾಟಕ ಅರಣ್ಯ ಕಾಯಿದೆ ಕಲಂ.104(ಎ) ಮತ್ತು ಕರ್ನಾಟಕ ಅರಣ್ಯ ನಿಯಮ 144 ಸಹವಾಚಕ ಕಲಂ.165 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ದುರುದ್ದೇಶದಿಂದ ಬೆಲೆ ಬಾಳುವ ಬೀಟೆ ಜಾತಿಯ ಮರಗಳನ್ನು ಕಡಿದು 19 ತುಂಡುಗಳನ್ನಾಗಿ ಪರಿವರ್ತಿಸಿ 24=653 ಘ.ಮೀ. ಬೆಲೆಬಾಳುವ ಬೀಟೆ ತುಂಡುಗಳನ್ನು ಅಪ್ರಾಮಾಣಿಕತೆಯಿಂದ ಕಳ್ಳತನ ಮಾಡಲು ಪ್ರಯತ್ನಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.379 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ಅಪರಾಧಗಳಿಗಾಗಿ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು.

ದಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ತೀರ್ಥಹಳ್ಳಿ